**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 952/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಎಸ್.ಎಸ್. ಪರಮೇಶ್ವರಪ್ಪ** | ಪ್ರಾಸಾಃ 6 |
| ತಂದೆಯ/ಗಂಡನ ಹೆಸರು | | ಲೇಟ್ ಎಸ್.ಸಿದ್ದಲಿಂಗೇಗೌಡ | ಚಾಸಾಃ 5 |
| ವಯಸ್ಸು | | 56 ವರ್ಷ | |
| ಕೆಲಸ | | ವಿಭಾಗೀಯ ಸಂಚಲನ ಅಧಿಕಾರಿ, ಮಂಡ್ಯ ವಿಭಾಗ | ಸಾ ಪ್ರ ಬೋ |
| ವಾಸ | | ಮಂಡ್ಯ | ದಿಃ 31/07/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಂಜನಗೂಡು ಡಿಪೋ ದಲ್ಲಿ 2013 ರಿಂದ 2016 ರವರೆಗೆ ಘಟಕ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಚಾಸಾ 1 ಬಿಲ್ಲೆ ಸಂಖ್ಯೆ 1111 ರವರನ್ನು ದಿಃ19.05.2014 ರಂದು ಮಾರ್ಗ ಸಂಖ್ಯೆ 14 ಬಸ್ ಸಂಖ್ಯೆ ಎಕ-09-ಎಫ್-3959 ಕ್ಕೆ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸಿದ್ದು, ಸದರಿ ಯವರಿಗೆ ಇಬಿಟಿಎಂ ಸಂಖ್ಯೆ 50115023 ನೀಡಲಾಗಿತ್ತು. ಈ ಸಂಬಂಧ ದೃಡೀಕರಣ ಪತ್ರವನ್ನು ನೀಡಿದ್ದೇನೆ. ಈಗ ನನಗೆ ತೋರಿಸಿದ ದಾಖಲೆಯು ನಾನು ನೀಡಿದ ದೃಡೀಕರಣ ಪತ್ರವಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ, ದೃಡೀಕರಣ ಪತ್ರವನ್ನು ನಿಪಿ-5 ಎಂದು, ಸಾಕ್ಷಿಯು ಗುರುತಿಸಿದ ರುಜುವನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಇಬಿಟಿಎಂ ಯಂತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಇಬಿಟಿಎಂ ಯಂತ್ರವನ್ನು ನೋಡಿ ಗುರುತಿಸಿ ಅದನ್ನು ಚಾಸಾ 1 ರವರಿಗೆ ನೀಡಲಾಗಿತ್ತು ಎಂದು ನುಡಿದಿದ್ದು, ಈಗಾಗಲೇ ಇಬಿಟಿಎಂ ಯಂತ್ರವನ್ನು ಮು.ಮಾ 1 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರಿಂದಃ

ಮು.ಮಾ 1 ನ್ನು ಚಾಸಾ 1 ರವರಿಗೆ ನೀಡಲಾಗಿತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಇಬಿಟಿಎಂ ಯಂತ್ರಗಳು ಆಯಾ ಕಂಪನಿಯವರು ನೀಡುವ ಅಳತೆಗೆ ಅನುಗುಣವಾಗಿರುತ್ತದೆ. ಮು.ಮಾ 1 ನ್ನು ಚಾಸಾ 1 ರವರಿಗೆ ನೀಡಲಾಗಿತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಚಾಸಾ 1 ರವರಿಗೆ ಇಬಿಟಿಎಂ ಯಂತ್ರ ನೀಡಿದ್ದ ಬಗ್ಗೆ ನಮ್ಮ ಇಲಾಖೆಯಲ್ಲಿ System ನಲ್ಲಿ ಇಬಿಟಿಎಂ ಯಂತ್ರದ ಕ್ರಮ ಸಂಖ್ಯೆ ಜನರೇಟ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಡಿಪೋ ದಿಂದ ಎಷ್ಟು ಮಾರ್ಗಕ್ಕೆ ಬಸ್ ಹೋಗುತ್ತದೆಯೋ ಅಷ್ಟು ಬಸ್‌ಗೆ ಇಬಿಟಿಎಂ ಯಂತ್ರ ನೀಡಿರರುತ್ತೇವೆ. ಮು.ಮಾ 1 ಇಬಿಟಿಎಂ ಯಂತ್ರ ವನ್ನು ಚಾಸಾ 1 ರವರಿಗೆ ನೀಡಲಾಗಿತ್ತು ಎಂದು ನಿಖರವಾಗಿ ಹೇಗೇ ಹೇಳುತ್ತಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಬಿಟಿಎಂ ಯಂತ್ರವನ್ನು ಪ್ರತಿಯೊಂದು ಮಾರ್ಗಕ್ಕೆ ನೀಡಿ System ನಲ್ಲಿ ಜನರೇಟ್ ಮಾಡಿರುತ್ತೇವೆ. ಜನರೇಟ್ ಆದ 72 ಗಂಟೆಯ ವರೆಗೂ ಅದರಲ್ಲಿ ಮಾರ್ಗದ ಡಾಟಾ ಇರುತ್ತದೆ ಎಂದು ನುಡಿಯುತ್ತಾರೆ. ಮು.ಮಾ 1 ನ್ನು ನೀಡಿದಾಗ ಮತ್ತು ಅದನ್ನು ಹಿಂಪಡೆದಾಗ ಸಂಬಂಧಪಟ್ಟ ಸಿಬ್ಬಂಧಿ ರುಜುವನ್ನು ದಾಖಲಾತಿಗೆ ತೆಗೆದುಕೊಳ್ಳುತ್ತೇವೆ. ಸದರಿ ದಾಖಲಾತಿಯನ್ನು ಪೊಲೀಸರಿಗೆ ನೀಡಿಲ್ಲ. ಮು.ಮಾ1 ನ್ನು ಚಾಸಾ 1 ರವರು ಪೊಲೀಸರಿಗೆ ನೀಡಿರುತ್ತಾರೆ. ಮು.ಮಾ 1 ರ ಮೇಲೆ ಯಾವುದೇ ವಿಶೇಷ ಗುರುತು ಇಲ್ಲದೇ ಇರುವುದರಿಂದ ಮು.ಮಾ 1 ನ್ನು ಚಾಸಾ 1 ರವರಿಗೆ ನೀಡಲಾಗಿತ್ತು ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ1 ನ್ನು ಚಾಸಾ 1 ರವರಿಗೆ ನೀಡಿದ ದಿನ ನಾನೇ ಕರ್ತವ್ಯದಲ್ಲಿ ಇದ್ದೆ. ಮು.ಮಾ 1 ನ್ನು ಚಾಸಾ 1 ರವರಿಗೆ ನೀಡಿದ ನಂತರ ಈ ದಿನವೇ ಮತ್ತೇ ಮು.ಮಾ 1 ನ್ನು ನೋಡುತ್ತಿದ್ದೇನೆ. ಮು.ಮಾ 1 ಸುಸ್ಥಿತಿಯಲ್ಲಿ ಇದೆಯೋ ಅಥವಾ ಇಲ್ಲವೋ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. 10 ವರ್ಷಗಳಾಗಿರುವುದರಿಂದ ನನಗೆ ಮು.ಮಾ1 ನ್ನು ನಿಖರವಾಗಿ ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದ್ಯೋಗಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

ನಂಜನಗೂಡು